**ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಶ್ರೀ. ಪಿ.ಜೆ.ಜಿ. ವಕೀಲರವರಿಂದಃ**

ದಾವಾ ಸ್ವತ್ತು ಈ.ಸಂಗಪ್ಪ ತಂದೆ ಲಕ್ಕಪ್ಪ ಇವರಿಗೆ ಸೇರಿದ್ದು ಅಂದರೆ ಸರಿಯಲ್ಲ. ಸದರಿಯವರು ವಾದಿಗೆ ರೂ 27,000 ಕ್ಕೆ ದಿನಾಂಕ 25.03.2004 ರಂದು ನೊಂದಾಯಿತ ಕ್ರಯಕ್ಕೆ ಕೊಟ್ಟಿರುವರು ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕಾನೂನು ಬದ್ಧವಾಗಿ ಕರೀದಿ ಪತ್ರ ನೊಂದಣೆ ಆಗಿರುವುದಿಲ್ಲ ಎಂದು ನುಡಿದರು. ಆ ಪ್ರಕಾರ ನಮ್ಮ ಮುನ್ಸಿಪಲ್ ಕಛೇರಿಯಲ್ಲಿ ಖಾತೆ ಕೂಡ ಆಗಿರುತ್ತದೆ ಅಂದರೆ ಸರಿಯಲ್ಲ. ಈ ಕೇಸಿನಲ್ಲಿ ವಾದಿಯು ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ವಾದಿ ಪ್ರತಿ ವರ್ಷ ಕಂದಾಯ ಪಾವತಿ ಮಾಡುತ್ತಾ ಬಂದಿರುವರು ಮತ್ತು ನಾವು ತೆಗೆದುಕೊಳ್ಳುತ್ತಿದ್ದೇವೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಮೂಲಬೂತ ಸೌಕರ್ಯವಾದ ಕಾರಣ ಕಂದಾಯ ಮುಂದುವರೆಸುತ್ತಾ ಬಂದಿರುತ್ತೇವೆ ಎಂದು ನುಡಿದರು.

**ಸಾಕ್ಷಿಯ ಸಹಿ** 07.03.2026

2. ವಾದಿಯ ಹೆಸರಿಗೆ ಸಂಗಪ್ಪನ ಹೆಸರಿನಿಂದ ಖಾತೆ ಬದಲಾವಣೆ ಆಗಿರುತ್ತದೆ ಅಂದರೆ ಸರಿ. ವಾದಿಯು ದಾವಾ ಅಸ್ತಿಗೆ ಕಂಪೌಂಡ್ ವಾಲ್ ಹಾಕಿಕೊಂಡಿದ್ದಾರೆ ಅಂದರೆ ಸರಿ ಅದು ಕಾನೂನು ಬಾಹೀರವಾಗಿರುತ್ತದೆ. ಪುರಸಬೆಯವರು ಈ ವರೆಗೆ ವಾದಿಯ ಹೆಸರಿಗೆ ಆಗಿರುವ ಖರೀದಿ ಪತ್ರವನ್ನು ಮತ್ತು ಮುಟೇಶನ್ ಆದೇಶವನ್ನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ ಅಂದರೆ ನೊಂದಣಿ ಪತ್ರವನ್ನು ಪ್ರಶ್ನಿಸಿರುವುದಿಲ್ಲ ಆದರೆ ಮುಟೇಶನ್ ಆದೇಶವನ್ನು ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಪ್ರಶ್ನಿಸಿದ್ದೇವೆ.

3. ಪುರಸಬೆ ಹಿಂದಿನ ಚೀಫ್ ಅಪೀಸರ್ ಅವರು ಈ ಹಿಂದೆ ಮಾಲೀಕರಾದ ಸಂಗಪ್ಪ ಇವರಿಗೆ ದಾವಾ ಸ್ವತ್ತಿನ ದಾಖಲೆಗಳನ್ನು ಹಾಜರು ಪಡಿಸುವಂತೆ ನೋಟೀಸನ್ನು ನೀಡಿದ್ದರು ಅಂದರೆ ಸರಿ. ವಾದಿಗೆ ಈ ವರೆಗೆ ಪುಸರಬೆಯಿಂದ ಯಾುವುದೇ ನೋಟೀಸು ಜಾರಿ ಮಾಡಿಸಿರುವುದಿಲ್ಲ ಅಂದರೆ ಸರಿ. ಅವರು ಮೂಲ ಮಾಲೀಕರಲ್ಲದ ಕಾರಣ ನೋಟೀಸು ಕೊಟ್ಟಿರುವುದಿಲ್ಲ. ರಾಜಕೀಯ ಒತ್ತಡದಿಂದ ಹಿಂದಿನ ಪುರಸಬೆಯು ಮುಖ್ಯಾಧಿಕಾರಿಯವರು ವಾದಿಗೆ ಯಾವುನೇ ನೋಟೀಸನ್ನು ಕೊಡದೇ ವಾದಿಗೆ ಗೊತ್ತಿಲ್ಲದಂತೆ ಮೂಲ

ಸಾಕ್ಷಿಯ ಸಹಿ 07.03.2026

ಮಾಲೀಕರಿಗೆ ನೋಟೀಸನ್ನು ನೀಡಿರುತ್ತಾರೆ ಅಂದರೆ ಸರಿಯಲ್ಲ. ವಾದಿಯು ದಾಖಲೆಗಳನ್ನು ಹಾಜರು ಪಡಿಸಿದರೂ ಸಹಿತ ನಾವು ಅದನ್ನು ಪರಿಶೀಲನೆ ಮಾಡದೇ ಅನವಶ್ಯಕವಾಗಿ ವಾದಿಯ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇವೆ ಅಂದರೆ ಸರಿಯಲ್ಲ.

4. ನಾನು ಹೇಳಿದಂತೆ ವಾದಿಯ ಹೆಸರನ್ನು ರದ್ದುಪಡಿಸಿ ಜಿಲ್ಲಾಧಿಕಾರಿಯವರು ಯಾವುದೇ ಅದೇಶವನ್ನು ಹೊರಡಿಸಿರುವುದಿಲ್ಲ ಅಂದರೆ ಸರಿಯಲ್ಲ. ಈಗಲೂ ಕೂಡ ವಾದಿ ಕಾನೂನು ಬದ್ದ ಸ್ವಾಧೀನವನ್ನು ಹೊಂದಿರುವರು ಅಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

07-03-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 07.03.2026